1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ದಾವಣಗೆರೆ.
ಎಸ್. ಸಿ. ಸಂಖ್ಯೆ: 05/2020

| | |
|---|---|
| ಪಿ.ಡಬ್ಲ್ಯೂ: | 02 |
| ಸಿ.ಡಬ್ಲ್ಯೂ: | 03 |
| ಪ್ರ.ಬೋ.ದಿನಾಂಕ: | 11-11-2021 |

| | | |
|---|---|---|
| ಹೆಸರು ಶ್ರೀ | :: | ಹನುಮಂತರಾವ್ ಹೆಚ್ ಎನ್ |
| ತಂದೆಯ ಹೆಸರು | :: | ನಾರಾಯಣರಾವ್ |
| ವಯಸ್ಸು | :: | 49 ವರ್ಷ |
| ಉದ್ಯೋಗ | :: | ಆಟೋ ಕನ್ಸಲ್ಟೆನ್ಸಿ ವರ್ಕ್ |
| ವಾಸ | :: | ದಾವಣಗೆರೆ |

**ಮುಖ್ಯ ವಿಚಾರಣೆ:** ಮಾನ್ಯ ಸರ್ಕಾರಿ ಅಭಿಯೋಜಕರಿಂದ:

ನನ್ನ ಮನೆ ಕುವೆಂಪು ನಗರದಲ್ಲಿ ಬರುತ್ತದೆ. ಪಿರ್ಯಾದುದಾರರ ಮನೆ ನಮ್ಮ ಮನೆಯಿಂದ 150 ಅಡಿ ದೂರದಲ್ಲಿದೆ.

2. ಇಲ್ಲಿಗೆ 3 ವರ್ಷದ ಹಿಂದೆ ಪಿರ್ಯಾದಿಯ ಹೆಂಡತಿ ಮತ್ತು ಕಿರಿಯ ಮಗಳು ತಮ್ಮ ಮನೆಯಲ್ಲಿ ನೇಣು ಹಾಕಿಕೊಂಡಿದ್ದರು. ಸದರಿ ವಿಚಾರವಾಗಿ ಪೊಲೀಸರು ಸ್ಥಳಕ್ಕೆ ಬಂದು ಮಹಜರು ಮಾಡಿದ್ದಾರೆ. ಆಗ ಸಮಯ ರಾತ್ರಿ 9.00 ರಿಂದ 10.00 ಗಂಟೆ ಆಗಿತ್ತು. ಆ ಸಮಯದಲ್ಲಿ ನಾನು ಹಾಗೂ ಬೇರೆಯವರು ಸಹ ಇದ್ದೇವು. ಆ ಸ್ಥಳದಲ್ಲಿ ಪೋಟೋಗಳನ್ನು ತೆಗೆದಿದ್ದಾರೆ ಹಾಗೂ ಪೊಲೀಸರು ನೇಣು ಹಾಕಿಕೊಳ್ಳಲು ಉಪಯೋಗಿಸಿದ್ದ ಸೀರೆಗಳನ್ನು ಜಪ್ತಿ ಮಾಡಿದ್ದಾರೆ. ಪೊಲೀಸರು ಶವವನ್ನು ಆ್ಯಂಬುಲೆನ್ಸ ನಲ್ಲಿ ತೆಗೆದುಕೊಂಡು ಹೋಗಿದ್ದಾರೆ. ಸದರಿ ಮಹಜರಿಗೆ ನಾನು ಸಹಿ ಮಾಡಿದ್ದೇನೆ.

3. ಸಾಕ್ಷಿ ಮಹಜರಿನಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಪಿ-2 ಎಂದು ಗುರುತಿಸಲಾಗಿದೆ. ಅದರಲ್ಲಿನ ಸಾಕ್ಷಿಯ ಸಹಿಯನ್ನು ನಿಪಿ-2(ಬಿ) ಎಂದು ಗುರುತಿಸಲಾಯಿತು. ಆ ಸ್ಥಳದಲ್ಲಿ ತೆಗೆದ ಪೋಟೋಗಳನ್ನು ನೋಡುತ್ತಿದ್ದು, ಅವುಗಳನ್ನು ಈಗಾಗಲೇ ನಿಪಿ-3 ರಿಂದ ನಿಪಿ-18 ಎಂದು ಗುರುತಿಸಲಾಗಿದೆ. ಆ ಸಮಯದಲ್ಲಿ ಜಪ್ತಿ ಮಾಡಿದ ಸೀರೆಗಳನ್ನು ಮು.ಮಾ.1 ಮತ್ತು 2 ಎಂದು ಗುರುತಿಸಲಾಗಿದೆ. ಆರೋಪಿ ದುಡ್ಡು ಮತ್ತು ಬಂಗಾರ ಕೊಡಿ ಎಂದು ಮೃತಳಿಗೆ ಹಿಂಸೆ ಕೊಡುತ್ತಿದ್ದರಿಂದ ಅವರಿಬ್ಬರೂ ನೇಣು ಹಾಕಿಕೊಂಡಿದ್ದಾರೆಂದು ಗೊತ್ತಾಯಿತು.

**ಪಾಟೀ ಸವಾಲು ಆರೋಪಿ ಪರ ವಕೀಲರಿಂದ:**

4. ಪೊಲೀಸರು ನನಗೆ ಸ್ಥಳಕ್ಕೆ ಬನ್ನಿ ಎಂದು ನೋಟೀಸ್ ಕೊಟ್ಟಿಲ್ಲ. ದಿ: 20.12.2018 ರಂದು ನಾನು ಮಹಜರಿಗೆ ಸಹಿ ಮಾಡಿದ್ದೇನೆ. ಪೊಲೀಸರು ಮಹಜರನ್ನು ಬರೆದಿರುತ್ತಾರೆ. ಪೊಲೀಸರಿಗೆ ನಾನು ಹೇಳಿದ್ದನ್ನು ಕೇಳಿಸಿಕೊಂಡು ಮಹಜರನ್ನು ಬರೆದಿದ್ದಾರೆ. ಪಂಚನಾಮೆ ಸಮಯದಲ್ಲಿ ತೀರಿಕೊಂಡಿದ್ದವರ ಕಡೆಯವರು, ಪೊಲೀಸರು ಇದ್ದರು. ಪಂಚನಾಮೆ ಸಮಯದಲ್ಲಿ ಸುಮಾರು 20-25 ಜನ ಸೇರಿದ್ದರು. ಮನೆಯ ಒಳಗಡೆ 5-

6 ಜನ ಮಾತ್ರ ಇದ್ದರು. ಆರೋಪಿ ಹಣ ಮತ್ತು ಬಂಗಾರಕ್ಕೆ ಹಿಂಸೆ ಕೊಟ್ಟಿದ್ದರಿಂದ ಅವರಿಬ್ಬರೂ ನೇಣು ಹಾಕಿಕೊಂಡಿದ್ದಾರೆಂದು ಸುಳ್ಳು ಹೇಳಿದ್ದೇನೆ ಎಂದರೆ ಸರಿಯಲ್ಲ. ನಾನು ಮಹಜರಿಗೆ ಪೊಲೀಸ್ ಠಾಣೆಯಲ್ಲಿ ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ. ಮಹಜರಿನಲ್ಲಿರುವ ಎಲ್ಲಾ ವಿಷಯಗಳನ್ನು ನಾನು ಓದಿ ತಿಳಿದುಕೊಂಡಿಲ್ಲ. ನಾನು ಸ್ಥಳಕ್ಕೆ ಹೋಗಿಲ್ಲ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ. ಹೇ. ಕೇ. ಸರಿಯಾಗಿದೆ

1 ನೇ ಹೆ. ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದಾವಣಗೆರೆ.